# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 934
ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18.12.2018
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕಾರಂಜಾ ನೀರಾವರಿ ಯೋಜನೆಗಾಗಿ ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತೀರ್ಣವೆಷ್ಟು; (ಸ್ವಾಧೀನಪಡಿಸಿಕೊಂಡ ದಿನಾಂಕದೊಂದಿಗೆ ಮಾಹಿತಿ ನೀಡುವುದು) | ಕಾರಂಜಾ ನೀರಾವರಿ ಯೋಜನೆಗಾಗಿ ಇಲ್ಲಿಯವರೆಗೆ ಒಟ್ಟು ವಿಸ್ತೀರ್ಣ 21469 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.<br>ವಿಸ್ತೀರ್ಣ: ಎಕರೆ-ಗುಂಟೆಗಳಲ್ಲಿ<br>ಮುಳಗಡೆ ಪ್ರದೇಶಕ್ಕಾಗಿ: 15522-25<br>ಕಾಲುವೆಗಾಗಿ: 5565-04<br>ಪುನರ್ ವಸತಿಗೆ: 378-14<br>ಒಟ್ಟು: 21469-03 |
| ಆ. | ಭೂ ಸ್ವಾಧೀನ ಅಧಿಸೂಚನೆ ಸಂಖ್ಯೆ:6(1)ನ್ನು ಯಾವಾಗ ಹೊರಡಿಸಲಾಯಿತು; | ಕಾರಂಜಾ ಯೋಜನೆ ಅಡಿಯಲ್ಲಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳ 6(1)ರ ಅಧಿಸೂಚನೆಯನ್ನು 1978-79, 1979-80, 1980-81, 1981-82, 1983-84 1984-85,1985-86 1986-87, 1990-91, 1993-94, 1997-98, 1998-99 1999-2001, 2002-03, 2003-04, 2004-05, 2006-07 2010-11, 2011-12, 2013-14 ಸಾಲುಗಳಲ್ಲಿ ಹೊರಡಿಸಲಾಗಿದೆ. |
| ಇ. | ರೈತರಿಗೆ ಸಂದಾಯ ಮಾಡಲಾದ ಒಟ್ಟು ಪರಿಹಾರದ ಮೊತ್ತವೆಷ್ಟು; ತಲಾ ಒಂದು ಎಕರೆಗೆ ನೀಡಲಾದ ಸರಾಸರಿ ಪರಿಹಾರ ಮೊತ್ತವೆಷ್ಟು; | ರೈತರಿಗೆ ಸಂದಾಯ ಮಾಡಲಾದ ಒಟ್ಟು ಮೊತ್ತ ರೂ. 163.35 ಕೋಟಿ<br>ತಲಾ ಒಂದು ಎಕರೆಗೆ ನೀಡಲಾದ ಸರಾಸರಿ ಪರಿಹಾರ ಮೊತ್ತ ರೂ. 21,833/- |
| ಈ. | ಭೂ ಸ್ವಾಧೀನದಲ್ಲಿ ತಮ್ಮ ಭೂಮಿ ಕಳೆದುಕೊಂಡ ಎಲ್ಲಾ ರೈತರು ಪರಿಹಾರದ ಮೊತ್ತವನ್ನು ಸ್ವೀಕರಿಸಿದ್ದಾರೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; | ಕಾರಂಜಾ ಯೋಜನೆಯಡಿಯಲ್ಲಿ ಭೂಸ್ವಾಧೀನ ಪಡಿಸಿಕೊಂಡ ಎಲ್ಲಾ ಭೂ ಮಾಲೀಕರಿಗೆ ಐತೀರ್ಪು ಪರಿಹಾರ ಮೊತ್ತವನ್ನು ವಿತರಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ನ್ಯಾಯಾಲಯದಲ್ಲಿ ಅಪೀಲು ದಾಖಲಿಸಿದ್ದರಿಂದ ಪರಿಹಾರ ಧನ ವಿತರಣೆ ಬಾಕಿ ಇರುತ್ತದೆ. ಸದರಿ ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಅಪೀಲು ಪ್ರಕರಣಗಳು ಮುಕ್ತಾಯ ಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಪರಿಹಾರ ಧನ ವಿತರಣೆ ಕುರಿತು ಕ್ರಮ ಜರುಗಿಸಲಾಗುವುದು. |
| ಉ. | ರೈತರಿಗೆ ಇನ್ನು ಸಂದಾಯ ಮಾಡದಿರುವ ಪರಿಹಾರ ಮೊತ್ತವೆಷ್ಟು; ಸಂಬಂಧಪಟ್ಟ ಎಲ್ಲಾ ರೈತರಿಗೆ ಪರಿಹಾರದ ಹಣವನ್ನು ಸಂದಾಯ ಮಾಡುವ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು? | ರೈತರಿಗೆ ಇನ್ನು ರೂ. 6.00 ಕೋಟಿ ಸಂದಾಯ ಮಾಡಬೇಕಾಗಿರುತ್ತದೆ. ಸದರಿ ಮೊತ್ತವನ್ನು ನ್ಯಾಯಾಲಯದಲ್ಲಿ ಪ್ರಕರಣಗಳು ಇತ್ಯಾರ್ಥವಾದ ನಂತರ ನಿಯಮಾನುಸಾರ ಪರಿಶೀಲಿಸಿ ಅತ್ಯಂತ ತುರ್ತಾಗಿ ವಿತರಿಸುವ ಕ್ರಮ ಕೈಗೊಳ್ಳಲಾಗುವುದು. |
| ಊ. | ಪರಿಹಾರವನ್ನು ಸಂದಾಯ ಮಾಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು; ರೈತರಿಗೆ ಶೀಘ್ರವಾಗಿ ಪರಿಹಾರ ಸಂದಾಯ ಮಾಡಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ಯಾವ ಕ್ರಮವನ್ನು ತೆಗೆದುಕೊಳ್ಳಲು ಉದ್ದೇಶಿಸಿದೆ? (ಸ್ಪಷ್ಟ ಮಾಹಿತಿ ನೀಡುವುದು). | ಅಪೀಲು ಪ್ರಕರಣಗಳು ಹಾಗೂ ತಕರಾರು ಪ್ರಕರಣಗಳು ನ್ಯಾಯಾಲಯದಲ್ಲಿದ್ದರಿಂದ ರೈತರಿಗೆ ಪರಿಹಾರ ಧನ ವಿತರಿಸಲು ವಿಳಂಬವಾಗುತ್ತಿದೆ. ರೈತರಿಗೆ ಶೀಘ್ರವಾಗಿ ಪರಿಹಾರ ಧನ ಸಂದಾಯ ಮಾಡಲು ಕರ್ನಾಟಕ ನೀರಾವರಿ ನಿಗಮದಿಂದ ನ್ಯಾಯಾಲಯದಲ್ಲಿ ಲೋಕ್ ಅದಾಲತ್ ನಲ್ಲಿ ಪ್ರಕರಣಗಳನ್ನು ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುತ್ತಿದೆ. |

ಸಂಖ್ಯೆ: ಜಸಂಇ 73 ಎಂಎಲ್ಎ 2018

[ಡಿ.ಕೆ. ಶಿವಕುಮಾರ್]
ಜಲ ಸಂಪನ್ಮೂಲ ಸಚಿವರು